ಪ್ರಾಕೃತ ಮತ್ತು ಅಪಭ್ರಂಶ ಸಾಹಿತ್ಯಕ್ಕೆ ಕರ್ನಾಟಕ ಕೊಟ್ಟಿರುವ ಕೊಡುಗೆ ದೊಡ್ಡದು. ಅವರ ಕೃತಿಗಳಲ್ಲಿ ಕನ್ನಡದ ಶಬ್ದಗಳೂ ಇರುತ್ತವೆ. ಆ ಪ್ರಾಕೃತ ಅಪಭ್ರಂಶ ಕೃತಿಗಳ ಬಗ್ಗೆ ನಮ್ಮಲ್ಲಿ ಅಧ್ಯಯನಗಳೇ ನಡೆಯುತ್ತಿಲ್ಲ. ಅಪಭ್ರಂಶ ಸಾಹಿತ್ಯದ ಮಹಾಕವಿ ಪುಷ್ಪದಂತ ನಾಯಕುಮಾರ ಚರಿವು, ಜಸಹಾರ ಚರಿವು ಎಂದೆಲ್ಲ ಕೆಲವು ಕೃತಿಗಳನ್ನು ಬರೆದಿದ್ದಾನೆ. ಅದರಲ್ಲಿ ಬರುವ ದೇಶಿ ಶಬ್ದಗಳ ಮೇಲೆ ಪಿಎಚ್.ಡಿ. ನಿಬಂಧಗಳು ಬಂದಿವೆ; ಅದು ಗುಜರಾತಿನಿಂದ ಪ್ರಕಟವಾಗಿವೆ. ಈ ರೀತಿಯ ಅಧ್ಯಯನಗಳನ್ನು ನಾವು ಮಾಡುತ್ತಲೂ ಇಲ್ಲ. ಮಾಡಿರುವ ಅಧ್ಯಯನಗಳನ್ನು ಬಳಸಿಕೊಳ್ಳುತ್ತಲೂ ಇಲ್ಲ.

◆ **ನೀವು ಸಂಗೀತಶಾಸ್ತ್ರದ ಕುರಿತೂ ಒಂದು ಪುಸ್ತಕ ಪ್ರಕಟಿಸಿದ್ದೀರಿ. ಅದರ ಕುರಿತು ಆಸಕ್ತಿ ಹುಟ್ಟಿದ್ದು ಹೇಗೆ?**

'ಕರ್ನಾಟಕ ಸಂಗೀತ' ಪ್ರಸಿದ್ಧ ಸಂಗೀತ ಪ್ರಕಾರ. ಯಾಕೆ ಆ ಹೆಸರು ಬಂತು ಎಂಬ ಕುರಿತು ವಿಧವಿಧ ವಿವರಣೆಗಳು ಬಂದಿವೆ. ಆದರೆ ಇದಕ್ಕೆ ಶಾಸ್ತ್ರಕಾರರು ಎಷ್ಟು ಜನ ಇದ್ದಾರೆ ಎನ್ನುವ ಪ್ರಾಥಮಿಕ ಹಂತದ ಮಾಹಿತಿ ಕನ್ನಡದಲ್ಲಿಯಂತೂ ಇಲ್ಲ. ಇಂಗ್ಲಿಷಿನಲ್ಲಿ ವಿ. ರಾಘವನ್ ಬರೆದಿದ್ದರು. ಈಚೆಗೆ ಹಿಂದಿಯಲ್ಲಿ ಎರಡು ಮೂರು ಕೃತಿಗಳು ಬಂದಿವೆ. ಯಾವುದರಲ್ಲಿಯೂ ಸಮಗ್ರ ಮಾಹಿತಿ ಇಲ್ಲ. ಇದಕ್ಕೆ ಕಾರಣ ಅವರಿಗೆ ಕನ್ನಡ ಭಾಷೆಯ ಪರಿಚಯ ಇಲ್ಲ. ಆದರೆ ಒಂದು ಮೆಚ್ಚಿಕೊಳ್ಳಬೇಕು; ಇಲ್ಲಿ ನಮಗೆ ಬೇಡವಾಗಿದ್ದು ಉತ್ತರಭಾರತದಿಂದ ಪ್ರಕಟವಾಗುತ್ತಿದೆ. ಲಕ್ಷ್ಮೀನಾರಾಯಣ ಎಂಬ ಒಬ್ಬ ಸಂಗೀತಗಾರ ಕೃಷ್ಣದೇವರಾಯನ ಅಂತಃಪುರದವರಿಗೆ ವೀಣೆ ಕಲಿಸುತ್ತಿದ್ದ. 'ಸಂಗೀತ ಸೂರ್ಯೋದಯ' ಎಂಬ ಕೃತಿ ಬರೆದಿದ್ದಾನೆ. ಅದು ಅಚ್ಚಾಗಿರುವುದು ಈಗಿನ ಛತ್ತೀಸಗಡದ ಕೈರಾಗಡದ ಇಂದಿರಾ ಕಲಾಸಂಗೀತ ವಿಶ್ವವಿದ್ಯಾಲಯದಿಂದ. ಅದರ ಮೇಲೆ ಎರಡು ಪಿಎಚ್.ಡಿ. ಬಂದಿದೆ. ನಮ್ಮಲ್ಲಿ ಎಷ್ಟು ಜನರಿಗೆ ಅದರ ಕುರಿತು ಗೊತ್ತಿದೆ?

ಕರ್ನಾಟಕದಲ್ಲಿ ಇದರ ಬಗ್ಗೆ ಹೆಚ್ಚಿನ ಕೆಲಸ ಮಾಡಿದವರು ಡಾ. ರಾ. ಸತ್ಯನಾರಾಯಣ. ಅವರ ಅನುವಾದಗಳು, ಅವರು ಸಂಪಾದಿಸಿರುವುದೇ ಈವತ್ತು ನಮಗೆಲ್ಲ ಬಂಡವಾಳ. ಅಷ್ಟು ದೈತ್ಯ ವಿದ್ವಾಂಸ ಅವರು. ಅಂಥ ವಿದ್ವಾಂಸರು ನಮ್ಮಲ್ಲಿ ನಂತರ ಹುಟ್ಟಿಲ್ಲ. ಮುಂದೆ ಹುಟ್ಟಬೇಕಾದ ಅಗತ್ಯ ಖಂಡಿತ ಇದೆ. ನಾನು ಭಾರತೀಯ ಸಂಗೀತದ ಶಾಸ್ತ್ರಕಾರರು ಮತ್ತು ಶಾಸ್ತ್ರಕೃತಿಗಳು ಎಂಬ ವಿಷಯದ ಕುರಿತು ಅಧ್ಯಯನ ಮಾಡುತ್ತಿದ್ದೇನೆ. ಇದರಲ್ಲಿ ಕರ್ನಾಟಕದ ಕೊಡುಗೆಯನ್ನು ಅಲ್ಲಗಳೆಯುವ ಪ್ರಯತ್ನ ಬಲವಾಗಿಯೇ ನಡೆದಿದೆ. ಆದರೆ ಸಿಕ್ಕುವ ಆಧಾರಗಳನ್ನೆಲ್ಲ ತೆಗೆದುಕೊಂಡಾಗ ಎಷ್ಟೋ ಶಾಸ್ತ್ರಕಾರರ ಮೂಲನೆಲೆ ಕರ್ನಾಟಕವೇ ಎಂಬುದು ಗೊತ್ತಾಗುತ್ತದೆ.

ಶಾಸ್ತ್ರಗ್ರಂಥವನ್ನು ಪರಿಚಯ ಮಾಡಿಕೊಳ್ಳುವವರಿಗೆ ಇತಿಹಾಸದ ಹಿನ್ನೆಲೆಯೂ ಬೇಕು. ಅದು ನಮ್ಮ ಸಂಗೀತಶಾಸ್ತ್ರಕಾರರಲ್ಲಿ ಕಾಣುತ್ತಿಲ್ಲ. ಹೀಗಾಗಿ ಈವತ್ತು ಹಾಡುವವರು ಜಾಸ್ತಿಯಾಗಿದ್ದಾರೆಯೇ ಹೊರತು, ಶಾಸ್ತ್ರಭಾಗವನ್ನು ಸರಿಯಾಗಿ ಅರ್ಥೈಸಿಕೊಳ್ಳುವವರು ವಿರಳವಾಗಿದ್ದಾರೆ. ಹಾಗಾಗಿ ಸಂಗೀತ ಶಾಸ್ತ್ರಗ್ರಂಥಗಳ ಕುರಿತು ಪ್ರಾಥಮಿಕ ಮಾಹಿತಿ ಕೊಡಬೇಕು ಎಂದು ನಾನು ಕೆಲಸ ಮಾಡುತ್ತಿದ್ದೇನೆ.

◆ **ಈಗ ಸಂಶೋಧನಾ ಕ್ಷೇತ್ರದಲ್ಲಿ ತುರ್ತಾಗಿ ಆಗಬೇಕಾಗಿರುವ ಕೆಲಸಗಳೇನು?**

ಪ್ರಾಥಮಿಕ ಹಂತದ ಸಾಮಗ್ರಿಗಳನ್ನೆಲ್ಲ ಸರಿಯಾಗಿ, ಭಾರತೀಯ ದೃಷ್ಟಿಕೋನದ ನೆರವಿನಿಂದ ಕ್ರೋಡೀಕರಿಸಬೇಕು. ಹಾಗಂತ ಭಾರತದ ವಿದ್ವಾಂಸರು ಕೆಲಸ ಮಾಡಿಲ್ಲ ಎಂದಲ್ಲ. ಈ ನೂರು